


ಸಂಗ್ರಹ: ಡಿ. ವಿ. ಮೋಹನ ಪ್ರಕಾಶ್
ಚಿತ್ರ: ಪಿ. ಪುರುಷೋತ್ತಮ ಕಾರಂತ



ಒಂದು ಕಾಡಿನಲ್ಲಿ ಹಲವು ಮರಗಳಿದ್ದವು. ಎಲ್ಲಾ ಮರಗಳೂ ಎತ್ತರಕ್ಕೆ, ನೇರವಾಗಿ ಬೆಳೆದು ನಿಂತಿದ್ದವು. ಅವುಗಳ ಕಾಂಡ ಮತ್ತು ರೆಂಬೆಗಳೆಲ್ಲ ನೆಟ್ಟಗಿದ್ದವು. ಅವು ಬಹು ಹೆಮ್ಮೆಯಿಂದ ತಲೆಯೆತ್ತಿ ನಿಂತಿದ್ದಂತೆ ತೋರುತ್ತಿತ್ತು. ಅವುಗಳ ನಡುವೆ ಒಂದೇ ಒಂದು ಮರವು ಮಾತ್ರ ಸೊಟ್ಟಗೆ ಬೆಳೆದಿತ್ತು. ಕಾಂಡವು ಗೂನು ಬೆನ್ನಿನಂತೆ ಬಾಗಿತ್ತು. ಅದರ ರೆಂಬೆ ಕೊಂಬೆಗಳು ಕೂಡಾ ಅಂಕುಡೊಂಕಾಗಿದ್ದವು. ಈ ಮರಕ್ಕೆ ತಲೆ ಎತ್ತಲು ನಾಚಿಕೆ ಆದಂತಿತ್ತು. "ನಾನು ಸಹ ಬೇರೆ ಮರಗಳಂತೆ ಇರಬಾರದಿತ್ತೆ?" ಅಂತ ಅನಿಸುತ್ತಿತ್ತು ಅದಕ್ಕೆ. ಯಾವಾಗಲೂ ಅದು ಸಪ್ಪಗಿರುತ್ತಿತ್ತು.

ಒಂದು ದಿನ ಒಂದಷ್ಟು ಜನ ಲಾರಿಗಳಲ್ಲಿ ಬಂದರು. ಅವರು ಕೊಡಲಿ, ಹಗ್ಗ ಮತ್ತು ಗರಗಸಗಳನ್ನು ತಂದಿದ್ದರು. ಅಲ್ಲಿದ್ದ ಮರಗಳನ್ನು ಕಂಡು ಅವರಿಗೆ ಹರ್ಷವಾಯಿತು. ಒಂದೊಂದಾಗಿ ಎಲ್ಲಾ ಮರಗಳನ್ನು ಕಡಿದು ಕಡಿದು ಹಾಕಿದರು. ರೆಂಬೆಗಳನ್ನೂ ಕತ್ತರಿಸಿದರು. ಎಲ್ಲವನ್ನೂ ಲಾರಿಗಳಲ್ಲಿ ತುಂಬಿಕೊಂಡರು.

ಕಡೆಗೆ ಉಳಿದದ್ದು ಒಂದೇ ಮರ. ಅದೇ ಈ ಬಾಗಿದ್ದ ಮರ. ಕಡಿಯುವ ಜನ ಅದರ ಬಳಿ ಬಂದರು. ಅದನ್ನು ಎಲ್ಲಾ ಕಡೆಯಿಂದ ನೋಡಿದರು. "ಈ ಮರ ನಮಗೆ ಪ್ರಯೋಜನಕ್ಕೆ ಬಾರದು. ಒಂದು ಕಡೆಯೂ ನೆಟ್ಟಗಿಲ್ಲ. ಇದರಿಂದ ಹಲಗೆಗಳನ್ನು ಮಾಡಲು ಆಗದು. ಬರೀ ಗಂಟುಗಂಟೇ..." ಅಂದುಕೊಂಡರು ಅವರುಗಳು. ತಮ್ಮ ತಮ್ಮ ಲಾರಿಗಳನ್ನು ಹತ್ತಿಕೊಂಡು ಹೊರಟುಬಿಟ್ಟರು.

ಆಗ, ಉಳಿದುಕೊಂಡ ಈ ಮರಕ್ಕೆ 'ಹಾಯ್' ಅನ್ನಿಸಿತು. ಅದು ಅಂದುಕೊಂಡಿತು: 'ನನ್ನ ಅಂಕುಡೊಂಕುಗಳಿಂದಲೇ ನಾನಿಂದು ಬದುಕಿದೆ!"

"ನಾನು ದುರ್ಬಲನಾಗಿದ್ದು ಸುತ್ತಮುತ್ತ ಬೆಳೆದಿದ್ದ ದೊಡ್ಡ ಮರಗಳಿಂದ ಎನ್ನುವುದು ಸರಿಯೇ. ಆದರೆ, ಬಿಸಿಲಿನ ತೀವ್ರತೆಯಿಂದ, ರಭಸವಾದ ಬಿರುಗಾಳಿಯಿಂದ ರಕ್ಷಣೆಯನ್ನೂ ಆ ಮರಗಳು ನನಗೆ ನೀಡಿವೆ. ಈಗ ನನ್ನ ಜೊತೆಯವರಿಲ್ಲದೆ ನನ್ನನ್ನು ಕಾಪಾಡುವವರು ಯಾರು? ನನ್ನ ವಕ್ರತೆಯು ನನ್ನನ್ನು ಉಳಿಸಿದಂತೆ ನನ್ನ ಸ್ನೇಹಿತರೂ, ಅಕ್ಕಪಕ್ಕದವರೂ ನನ್ನ ಜೀವನಕ್ಕೆ ಸ್ನೇಹವೆರೆದಿದ್ದಾರೆ." ಈ ಭಾವನೆಗಳು ಆ ಡೊಂಕುಡೊಂಕಾದ ಮರಕ್ಕೆ ಧನ್ಯತೆ ಹಾಗೂ ದುಃಖಗಳನ್ನು ಒಮ್ಮೆಗೇ ತಂದವು.